# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 246/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಮಂಜುನಾಥ ಎಂ ಎಸ್ | ಪಿಡಬ್ಲ್ಯೂ ಃ 4 |
| ತಂದೆಯ / ಗಂಡನ ಹೆಸರು | : ವಿ ಸಿ ನಾಗರಾಜು | ಸಿಡಬ್ಲ್ಯೂ ಃ 4 |
| ವಯಸ್ಸು | : 51 ವರ್ಷ | |
| ಉದ್ಯೋಗ | : ಕ್ಯಾಷಿಯರ್ , ರಾಜಲಕ್ಷ್ಮಿ ಸ್ಪಿರಿಟ್ಸ್ | |
| ವಾಸಸ್ಥಳ | : ಸಾತಗಳ್ಳಿ, ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 23.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ನಾನು ರಾಜಲಕ್ಷ್ಮಿ ಸ್ಪಿರಿಟ್ಸ್ ವೈನ್ ಶಾಪ್ ನಲ್ಲಿ 2020 ರಿಂದ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾವು ಮಧ್ಯವನ್ನು ಮಾರಾಟ ಮಾಡುತ್ತೇವೆ. ನಮ್ಮ ಅಂಗಡಿಗೆ ಒಂದು 5 ಸಿಸಿ ಟಿವಿ ಕ್ಯಾಮಾರಗಳನ್ನು ಅಳವಡಿಸಿದ್ದು, ಅದರಲ್ಲಿ 4 ಕ್ಯಾಮಾರಗಳು ಅಂಗಡಿಯ ಒಳಗಡೆ ಅಳವಡಿಸಿದ್ದು, 1 ಹೊರಗಡೆ ಅಳವಡಿಸಲಾಗಿದೆ. ದಿ.14.12.2022 ರಂದು ಮಂಡಿ ಪೊಲೀಸ್ ಠಾಣೆ ಯ ಪೊಲೀಸರು ಬೆಳಗ್ಗೆ 11.00–11.30 ರ ಸಮಯಕ್ಕೆ ಬಂದು, ನಮ್ಮ ಅಂಗಡಿಯಲ್ಲಿ ಅಳವಡಿಸಿದ ಸಿಸಿ ಟಿವಿ ಕ್ಯಾಮಾರಗಳನ್ನು ಪರಿಶೀಲಿಸಿ ಅದರಲ್ಲಿ ಹಿಂದಿನ ದಿನ ರಾತ್ರಿ 07.00–.07.30 ಕ್ಕೆ ಕೆಲವು ಆಸಾಮಿಗಳು

ಮಧ್ಯವನ್ನು ಖರೀದಿ ಮಾಡಿದ ಬಗ್ಗೆ ಸಿಸಿ ಟಿವಿ ಕ್ಯಾಮಾರದಲ್ಲಿ ತೋರಿಸಿ ಈ ವ್ಯಕ್ತಿಗಳು ಬಂದು ಮಧ್ಯ ಖರೀದಿಸಿರುತ್ತಾರೆಯೇ ಎಂದು ವಿಚಾರಿಸಿ, ನನಗೆ ಗುರುತಿಸಲು ಕೇಳಿದಾಗ ನಾನು ಅವರು ಹಿಂದಿನ ದಿನ ರಾತ್ರಿ ಮಧ್ಯ ಖರೀದಿಸಿದ್ದರು ಎಂದು ತಿಳಿಸಿರುತ್ತೇನೆ. ಇಬ್ಬರು ಅಂಗಡಿಯ ಒಳಗಡೆ ಮಧ್ಯವನ್ನು ಖರೀದಿಸಿ, ಒಬ್ಬ ಆಸಾಮಿ ಹೊರಗಡೆ ಆಟೋ ಮುಂದೆ ನಿಂತಿದ್ದು, ಸದರಿ ಎಲ್ಲಾ ದೃಶ್ಯಗಳು ಸಿಸಿ ಟಿವಿಯಲ್ಲಿ ಸೆರೆಯಾಗಿದ್ದವು. ಸದರಿ ಆಸಾಮಿಗಳು ಮಧ್ಯದ **90 ML** ನ **3** ಟೆಟ್ರಾ ಪ್ಯಾಕ್ ಗಳನ್ನು ಖರೀದಿಸಿದ್ದರು. ಪೊಲೀಸರು ನನಗೆ ಸದರಿ ಆಸಾಮಿಗಳು ಅಂಗಡಿಯಿಂದ ಮಧ್ಯ ಖರೀದಿ ಮಾಡಿ ಮುಂದೆ ಹೋಗಿ ಗಲಾಟೆ ಮಾಡಿಕೊಂಡು ಒಬ್ಬ ವ್ಯಕ್ತಿಗೆ ಮಾರಾಣಾಂತಿಕವಾಗಿ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿ, ಸದರಿ ಸಿಸಿ ಟಿವಿ ದೃಶ್ಯಾವಳಿಗಳ ಬಗ್ಗೆ ಪರಿಶೀಲಿಸಿರುತ್ತಾರೆ.

3. ನಂತರ ಒಂದು ವಾರದ ಬಳಿಕ ಮಂಡಿ ಪೊಲೀಸರು ಒಬ್ಬ **Technician** ಅನ್ನು ಕರೆದುಕೊಂಡು ಬಂದು ಅಂಗಡಿಯ ಸಿಸಿ ಟಿವಿ ಕ್ಯಾಮಾರದಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು **pendrive** ನಲ್ಲಿ ಪಡೆದುಕೊಂಡಿರುತ್ತಾರೆ. ಸದರಿ **pendrive** ಮತ್ತು **CC TV** ದೃಶ್ಯಾವಳಿಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು, ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ಒಂದು **Pendrive** ಇತ್ತು. ಸದರಿ **Pendrive** ನ್ನು ನ್ಯಾಯಾಲಯದ ಕಂಪ್ಯೂಟರ್ ವಿಭಾಗದಿಂದ ಲ್ಯಾಪ್ ಟಾಪ್ ತರಿಸಿ ತೆರೆದ ನ್ಯಾಯಾಲಯದಲ್ಲಿ ಚಲಾಯಿಸಲಾಯಿತು. ಸಾಕ್ಷಿಯೂ ಸಿಸಿ ಟಿವಿ ದೃಶ್ಯಾವಳಿಗಳನ್ನು ನೋಡಿ ಗುರುತಿಸಿದ್ದು, ಸದರಿ **Pendrive** ನ್ನು ನಿಪಿ.6 ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ಸದರಿ ವ್ಯಕ್ತಿಗಳನ್ನು ಬಹಳ ವರ್ಷಗಳ ಹಿಂದೆ ನೋಡಿದ್ದು, ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

4. ನಾನು ಕ್ಯಾಷಿಯರ್ ಆಗಿ ರಾಜಲಕ್ಷ್ಮೀ ಸ್ಪಿರಿಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಪೊಲೀಸರಿಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸರಿ. ನನ್ನ ಕೆಲಸದ ಅವಧಿ ಬೆಳಿಗ್ಗೆ 10.30 ರಿಂದ ರಾತ್ರಿ 09.30 ರವರೆಗೆ ಇರುತ್ತದೆ. ನನಗೆ ಸಂಬಳವನ್ನು ನಗದು ರೂಪದಲ್ಲಿ ನೀಡುತ್ತಾರೆ. ನಗದು ರೂಪದಲ್ಲಿ ಸಂಬಳ ನೀಡಿದ ಬಗ್ಗೆ ಯಾವುದೇ ರಿಜಿಸ್ಟರ್ ಇರುವುದಿಲ್ಲ. ಒಂದು ನೋಟ್ ಬುಕ್ ನಲ್ಲಿ ಬರೆಸಿಕೊಳ್ಳುತ್ತಾರೆ. ಸದರಿ ರಾಜಲಕ್ಷ್ಮೀ ಸ್ಪಿರಿಟ್ಸ್ ಬಂಬೂ ಬಜಾರ್ ಬಳಿ ಇರುತ್ತದೆ. ಅದು ತುಂಬಾ ಜನನಿಬಿಡ ಸ್ತಳಾವಾಗಿರುತ್ತದೆ ಎಂದರೆ ಸರಿ. ತುಂಬಾ ವಾಹನ ಮತ್ತು ಜನರು ಓಡುತ್ತಾರೆ ಎಂದರೆ ಸರಿ. ಅಂಗಡಿಗೆ ದಿನಕ್ಕೆ 100-150 ಜನ ಸಂಜೆಯ ಮೇಲೆ ಬರುತ್ತಾರೆ ಎಂದರೆ ಸರಿ. ಬರುವ ಗ್ರಾಹಕರು ಯಾವ ಮಧ್ಯವನ್ನು ಖರೀದಿಸಿರುತ್ತಾರೆ ಎಂದು ಖಚಿತವಾಗಿ ಹೇಳಲು ಬರುದಿಲ್ಲ ಎಂದರೆ ಸರಿ. ಯಾವ ಯಾವ ವ್ಯಕ್ತಿಗಳು ಬರುತ್ತಾರೆ ಎಂದು ಕೂಡ ಹೇಳಲು ಬರುವುದಿಲ್ಲ ಎಂದರೆ ಸರಿ. ಸಿಸಿ ಟಿವಿ ಪರಿಶೀಲನೆ ಮಾಡಲು ನನಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿ. ಪೊಲೀಸರು ನಮ್ಮ ಅಂಗಡಿಗೆ ಬಂದು ಯಾವುದೇ ಸಿಸಿ ಟಿವಿ ಕ್ಯಾಮಾರಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸಿಸಿ ಟಿವಿಯನ್ನು ಚಲಾಯಿಸಿ ತೋರಿಸಲು ಬರುವುದಿಲ್ಲ ಎಂದರೆ ಸರಿ. ಸಿಸಿ ಟಿವಿ ಫುಟೇಜ್ ನ್ನು ತೆಗೆದು ತೋರಿಸಿರುತ್ತೇನೆ ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸಾಕ್ಷಿಯೂ ನಾನು ತೋರಿಸಿರುವುದಿಲ್ಲ, ಆದರೆ

ನನ್ನ ಮುಂದೆಯೇ ಪರಿಶೀಲನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ನಾನು ರಾಜಲಕ್ಷ್ಮೀ ಸ್ಪಿರಿಟ್ಸ್ ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಿಸಿ ಟಿವಿ ದೃಶ್ಯಾವಳಿಗಳನ್ನು ನೋಡಿರುವುದಿಲ್ಲ, ಅದರಲ್ಲಿ ಯಾವುದೇ ಆಸಾಮಿಗಳು ಬಂದು ಮಧ್ಯ ಖರೀದಿಸಿದ ಬಗ್ಗೆ ನೋಡಿರುವುದಿಲ್ಲ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ನ್ಯಾಯಾಲಯದಲ್ಲಿ ನೋಡಿದ ದೃಶ್ಯಾವಳಿಗಳು ರಾಜಲಕ್ಷ್ಮೀ ಸ್ಪಿರಿಟ್ಸ್ ನಲ್ಲಿ ಪಡೆದುಕೊಂಡ ದೃಶ್ಯಾವಳಿಗಳು ಆಗಿರುವುದಿಲ್ಲ. ಪೊಲೀಸರು ಸೃಷಿಸಿದ ದೃಶ್ಯಾವಳಿಗಳಿಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ದೃಶ್ಯಾವಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ದೃಶ್ಯಾವಳಿಗಳನ್ನು **Technician** ಮುಖಾಂತರ ಪೆನ್ ಡ್ರೈವ್ ನಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**